# ಕೊಡಗಿನ ಮಳೆದೇವರು ಇಗ್ಗುತ್ತಪ್ಪ



**ಮಡಿಕೇರಿ ತಾಲ್ಲೂಕಿನ ಕಕ್ಕಬ್ಬೆಯಿಂದ 3 ಕಿ.ಮೀ ದೂರದಲ್ಲಿದೆ ಈ ದೇವಾಲಯ. ಗುಡ್ಡದ ಮೇಲಿರುವ ದೇವಾಲಯಕ್ಕೆ ಕಾಲ್ನಡಿಗೆಯಲ್ಲೇ ತೆರಳಬೇಕು.**

■ ಚಿತ್ರ– ಲೇಖನ:
**ಸಿ.ಎಸ್. ಸುರೇಶ್**

ಪಾಡಿ ಇಗ್ಗುತ್ತಪ್ಪನಿಗೆ ಮಳೆದೇವರು ಎಂಬ ಖ್ಯಾತಿ. ಕೊಡಗಿನಲ್ಲಿ ಕೃಷಿಯನ್ನೇ ನಂಬಿ ಬದುಕುವ ಮಂದಿ ಮಳೆಗಾಗಿ ಪಾಡಿಯ ಇಗ್ಗುತ್ತಪ್ಪನನ್ನು ಪ್ರಾರ್ಥಿಸುತ್ತಾರೆ. ಮಳೆ ಹೆಚ್ಚಾಗಿ ಕೃಷಿಕಾರ್ಯಗಳಿಗೆ ಧಕ್ಕೆಯುಂಟಾಗುವ ಸೂಚನೆ ಕಂಡುಬಂದರೆ ಮಳೆ ಕಡಿಮೆಗೊಳಿಸಲೂ ಈತನಿಗೇ ಪ್ರಾರ್ಥನೆ.

ಕೊಡಗಿನ ಈ ಮಳೆ ದೇವರಿಗೆ ಭವ್ಯ ಸೂರೊಂದನ್ನು ಬಹಳ ಹಿಂದೆಯೇ ನಿರ್ಮಿಸಲಾಗಿದ್ದು ಅದು ಪಾಡಿ ಇಗ್ಗುತ್ತಪ್ಪ ದೇವಾಲಯವೆಂದೇ ಪ್ರಸಿದ್ಧಿ ಪಡೆದಿದೆ. ಕೊಡಗಿನ ಪವಿತ್ರ ಧಾರ್ಮಿಕ ಕ್ಷೇತ್ರಗಳಲ್ಲಿ ಈ ದೇವಾಲಯಕ್ಕೆ ಅಗ್ರಸ್ಥಾನ.

ಮಡಿಕೇರಿ ತಾಲೂಕಿನ ಕಕ್ಕಬ್ಬೆಯಿಂದ ಸುಮಾರು ಮೂರು ಕಿ.ಮೀ. ದೂರ ಸಾಗಿದರೆ ನಿಸರ್ಗದ ಚೆಲುವಿನಲ್ಲಿ ಕಂಗೊಳಿಸುವ ಇಗ್ಗುತ್ತಪ್ಪ ದೇವಾಲಯವನ್ನು ಸೇರಬಹುದು. ಸುತ್ತಲಿನ ನಿಸರ್ಗ ವೈಭವ ಹಿನ್ನೋಟಕ್ಕೆ ರಮಣೀಯ ತಡಿಯಂಡ ಮೋಳ್ ಪರ್ವತ ಸಾಲುಗಳು ನಿಮ್ಮ ಮನಕ್ಕೆ ಮುದ ನೀಡುತ್ತವೆ. ಅಂತೆಯೇ ಗುಡ್ಡದ ತುದಿಯಲ್ಲಿನ ಇಗ್ಗುತ್ತಪ್ಪನ ಪವಿತ್ರ ಸನ್ನಿಧಿ ಕೊಡಗಿನ ಮಂದಿಗೆ ಭಕ್ತಿಯ ನೆಲೆಯಾಗಿ ಮನಸ್ಸನ್ನು ಪ್ರಶಾಂತಗೊಳಿಸುತ್ತದೆ.

ಕಕ್ಕಬ್ಬೆ ಮಡಿಕೇರಿ ತಾಲೂಕಿಗೆ ಸೇರಿದ ಒಂದು ಪುಟ್ಟ ಊರು. ಇಲ್ಲಿಗೆ ತಕ್ಕಷ್ಟು ಖಾಸಗಿ ಬಸ್ ಸೌಲಭ್ಯವಿದೆ. ಆದರೆ ಇಲ್ಲಿಂದ ಸುಮಾರು ಮೂರು ಕಿ.ಮೀ. ದೂರದಲ್ಲಿರುವ ಪಾಡಿಗೆ ಒಂದೋ ಸ್ವಂತ ವಾಹನದಲ್ಲಿ ಇಲ್ಲವೇ ಬಾಡಿಗೆ ವಾಹನದಲ್ಲಿ ತೆರಳಬೇಕು. ಪಾಡಿಬೆಟ್ಟಕ್ಕೆ ಇಗ್ಗುತ್ತಪ್ಪ ಬೆಟ್ಟ ಅಥವಾ ಸುಬ್ರಹ್ಮಣ್ಯ ದೇವರ ಬೆಟ್ಟವೆಂದು ಸ್ಥಳೀಯವಾಗಿ ಕರೆಯಲಾಗುತ್ತದೆ. ಗುಡ್ಡದ ಮೇಲಿರುವ ಈ ಭವ್ಯ ದೇವಾಲಯಕ್ಕೆ ಮೆಟ್ಟಿಲುಗಳ ಮೂಲಕ ಹತ್ತಿ ಹೋಗಬೇಕು.

ಪಾಡಿಯ ಇಗ್ಗುತ್ತಪ್ಪನಿಗೆ ಭವ್ಯಸೂರು ನಿರ್ಮಾಣಗೊಂಡಿದ್ದು ಕ್ರಿ.ಶ. 1810 ಕೊಡಗು ರಾಜರ ಆಡಳಿತದಲ್ಲಿದ್ದ ಸಮಯದಲ್ಲಿ. ಆಗ ಕೊಡಗನ್ನು ಆಳುತ್ತಿದ್ದ ಅರಸ ಲಿಂಗರಾಜೇಂದ್ರ ತನ್ನ ಸೈನಿಕರೊಂದಿಗೆ ನಾಪೋಕ್ಲು ಎಂಬ ಊರಿಗೆ ಬೇಟೆಗಾಗಿ ಬಂದಿದ್ದು ತಾನು ಬೇಟೆಯಾಡಿದ ಪಾಡಿಯಲ್ಲಿ ಇಗ್ಗುತ್ತಪನಿಗೊಂದು ಭವ್ಯ ಸೂರನ್ನು ನಿರ್ಮಿಸಿದ. ಬೇಟೆಯ ಸಂದರ್ಭದಲ್ಲಿ ತಾನು ತೋರಿದ ಪರಾಕ್ರಮದ ಕುರುಹಾಗಿ ಬೆಳ್ಳಿಯ ಆನೆಯೊಂದನ್ನು ದೇವಾಲಯಕ್ಕೆ

